MVC No. 183/2023 - -

PW - 1

ದಿನಾಂಕಃ 17.10.2025 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ -

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಹಾಜರುಪಡಿಸಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದನ್ನು ನಾನು ಹೇಳಿ ಬರೆಯಿಸಿದ್ದು, ಬರೆದ ನಂತರ ಅದನ್ನು ನನಗೆ ಓದಿ ಹೇಳಿದ್ದು ನಂತರ ಸಹಿ ಮಾಡಿರುತ್ತೇನೆ. ನನ್ನ ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ.

ಎಫ್.ಐ.ಆರ್, ದೂರು, ಪಿಎಂ ಮತ್ತು ಶವ ತನಿಖಾ ವರದಿ, ಪಂಚನಾಮೆ, ಅಂತಿಮ ವರದಿಯ ದೃಢೀಕೃತ ನಕಲಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 1 ಎಂದು ಗುರುತಿಸಲಾಯಿತು. ಡಿಸಚಾರ್ಜ ಸಮ್ಮರಿ ನಿಪಿ 2 ಎಂದು, 5 ಸಿಟಿ ಸ್ಕ್ಯಾನ್ ವರದಿಗಳನ್ನು ಒಟ್ಟಾಗಿ ನಿಪಿ 3 ಎಂದು, 3 ಎಕ್ಸ ರೇ ಕಾಫಿಯನ್ನು ಒಟ್ಟಾಗಿ ನಿಪಿ 4 ಎಂದು, 2 ಸಿಟಿ ಸ್ಕ್ಯಾನ್ ವರದಿಗಳನ್ನು ಒಟ್ಟಾಗಿ ನಿಪಿ 5 ಎಂದು, ಮೆಡಿಕಲ್ ಬಿಲ್ಲುಗಳನ್ನು ಒಟ್ಟಾಗಿ ನಿಪಿ 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದ -

ನಾನು ಬಿ ಕಾಂ ಪದವಿ ಪಡೆದಿರುತ್ತೇನೆ. ಅಪಘಾತಕ್ಕೆ ಸಂಬಂಧಪಟ್ಟ ಸಂಪೂರ್ಣ ಮಾಹಿತಿ ನನಗೆ ಇದೆ. ಅಪಘಾತ ಆದ ದಿನ ನನ್ನ ತಂದೆಗೆ ಆರಾಮು ಇಲ್ಲದೇ ಚಿಕಿತ್ಸೆಗೆ ಹೊರಟಿದ್ದರು. ಆ ದಿನ ಕಾರಿನಲ್ಲಿ ಒಟ್ಟು 5 ಜನ ಹೋಗುತ್ತಿದ್ದರು. ಅಪಘಾತ ಆದ ನಂತರ ಉಡುಪಿಯ ಶ್ರೀನಿವಾಸ ಆಸ್ಪತ್ರೆಗೆ ಹೋಗಿದ್ದರು. ಸದರಿ ಆಸ್ಪತ್ರೆಯಲ್ಲಿ ದಾಖಲಾಗಿ 5 ದಿನ ಚಿಕಿತ್ಸೆ ಪಡೆಯಲಾಗಿತ್ತು. ಸದರಿ ಆಸ್ಪತ್ರೆಯ ಡಿಸ್ಚಾರ್ಜ ಕಾರ್ಡ ಹಾಜರು ಪಡಿಸಿಲ್ಲ ಎಂದರೆ ಹಾಜರು ಪಡಿಸಿದ್ದೇನೆ. ನಿಶಾನೆ ಪಿ ಸೀರಿಸ್ ಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ನೆನಪಾಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಯಾವ ಕಾರಣಕ್ಕೆ ಸದರಿ ಡಿಸ್ಚಾರ್ಜ ಹಾಜರು ಪಡಿಸಿಲ್ಲ ಎಂದು ವಿಚಾರಿಸುತ್ತೇನೆ. ಶ್ರೀನಿವಾಸ ಆಸ್ಪತ್ರೆಯಿಂದ 5 ದಿನಗಳು ಆದ ನಂತರ ಸಂಜೀವಿನಿ ಆಸ್ಪತ್ರೆಗೆ ಬಂದಿದ್ದೆವು. ನಿಪಿ2 ರ ಪ್ರಕಾರ ದಿನಾಂಕ 11.12.2022 ರಂದು ಆಸ್ಪತ್ರೆಯಿಂದ ಬಿಡುಗಡೆ ಹೊಂದುವಾಗ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿ. ಉದ್ದೇಶಪೂರ್ವಕವಾಗಿ ಡಿಸ್ಚ ಚಾರ್ಜ ಕಾರ್ಡನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ದಿನಾಂಕ 11.12.2022 ರ ಡಿಸ್ಚಾರ್ಜ ಬಿಲ್ಲುಗಳನ್ನು ಹಾಜರು ಪಡಿಸಿದ್ದು ಅವುಗಳ್ಳು ಪರಿಹಾರಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಶ್ರೀ ರಂಗ ಟ್ರಾವೆಲ್ ಬಿಲ್ಲುಗಳನ್ನು ಸಹ ಪರಿಹಾರಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಕೃಷಿಯಿಂದ 20 ಸಾವಿರ ರೂ ಆದಾಯ ಇತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಅಪಘಾತದಿಂದ ನನ್ನ ತಂದೆಯ ವೈದ್ಯಕೀಯ ಚಿಕಿತ್ಸೆಗೆ 1 ಲಕ್ಷ ರೂ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ದುಡಿಮೆಯ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

1 ಹಾಗೂ 2 ನೇ ಎದುರುದಾರರ ಪರ ವಕೀಲರು ಹಾಜರು ಇಲ್ಲದ ಕಾರಣ ಅವರ ಪರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಃಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ